ಇದರಿಂದಾಗಿ ರೇಟಿನಲ್ಲಿ ಎಸ್ಕಲೇಸನ್ನಾಗುತ್ತದೆ. ಮತ್ತೆ ಇನ್‌ಫ್ಲೇಷನ್ ಕೂಡ ಆಗುತ್ತದೆ. ೧೯೬೦ರ ವೇಳೆಗೆ ನೀರನ್ನು ಕೊಡುತ್ತೇವೆಂದು ಹೇಳುತ್ತಾರೆ. ೧೯೬೦ರ ವೇಳೆಗೆ ನೀರನ್ನು ಕೊಡುವುದಕ್ಕಾಗುತ್ತದೆಯೇ? ಇದರಿಂದಾಗಿ ಟಾಪ್ ಪ್ರಯಾರಿಟಿಯನ್ನು ಕೊಟ್ಟು ಈ ಯೋಜನೆಯನ್ನು ತೆಗೆದುಕೊಳ್ಳಬೇಕು. ಬೆಂಗಳೂರು ನಗರದಲ್ಲಿ ಮಾರ್ಚ್ ತಿಂಗಳು ಮುಗಿದು ಏಪ್ರಿಲ್-ಮೇ ತಿಂಗಳು ಬಂದರೆ ಮಲ್ಲೇಶ್ವರಂ ಹಾಗೂ ರಾಜಾಜಿನಗರ ಬಡಾವಣೆಗಳಿಗೆ ಕುಡಿಯುವ ನೀರೇ ಸಿಕ್ಕುವುದಿಲ್ಲ. ಎಲ್ಲಾ ಶಾಸಕರು ಬೆಂಗಳೂರು ನಗರದಲ್ಲೇ ನಿವೇಶನ ಬೇಕು ಎಂದು ಹೇಳುತ್ತಾರೆ. ಆದಕ್ಕಾಗಿ ನೀರಿನ ಸೌಕರ್ಯಕ್ಕೋಸ್ಕರ ಸರ್ಕಾರದಿಂದ ಹಣವನ್ನು ಕೊಡಿಸಿ ಎಂದರೆ ಯಾರೂ ಕೊಡಿಸುವುದಕ್ಕೆ ಮುಂದೆ ಬರುತ್ತಿಲ್ಲ. ನೀವೆ ಏನಾದರೂ ಮಾಡಿಕೊಳ್ಳಿ ರಿಸೋರ್ಸಸ್‌ನ್ನು ಮೊಬಿಲೈಸ್ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ಆದ್ದರಿಂದ ಇದನ್ನು ಯಾವ ಕಾರಣದಿಂದಲೂ ಡಿಲೇ ಮಾಡಕೂಡದು. ಆ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಖಚಿತ ಉತ್ತರವನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರಾದ ಶ್ರೀಮಾನ್ ರಘುಪತಿಯವರು ಹೇಳಿದ ವಿಚಾರಗಳನ್ನು ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಆದಷ್ಟು ಬೇಗ ಈಗಾಗಲೇ ಏನು ಅಂದಾಜು ಇದೆ ಅದರ ಪ್ರಕಾರ ೧೯೬೦ರ ಹೊತ್ತಿಗೆ ೩೨ನೇ ಹಂತದ ಕಾವೇರಿ ನೀರನ್ನು ಬೆಂಗಳೂರು ನಗರಕ್ಕೆ ತರಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ ಆ ಉದ್ದೇಶ ಸಫಲವಾಗುವುದಕ್ಕೋಸ್ಕರ ಏನೇನು ಕೆಲಸ ಮಾಡಬೇಕೋ ಅವುಗಳನ್ನು ಯಾವ ಒಂದು ವಿಳಂಬ ಇಲ್ಲದೆ ಮಾಡುತ್ತೇನೆ. ಯಾವ ತೊಂದರೆಗೂ ಒಳಗಾಗದೆ ಬೆಂಗಳೂರು ನಗರಕ್ಕೆ ನೀರನ್ನು ತರತಕ್ಕ ವಿಚಾರದಲ್ಲಿ ಪ್ರಯತ್ನ ಮಾಡುತ್ತೇನೆ.

ಈ ವರ್ಷದ ಏಪ್ರಿಲ್, ಮೇ ಹಾಗೂ ಜೂನ್‌ನಲ್ಲಿ ಹೋದವರ್ಷದ ರೀತಿಯಲ್ಲಿ ತೊಂದರೆ ಆಗುವುದಿಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ. ಹಣದ ಬಗ್ಗೆ ಮಾನ್ಯ ರಘುಪತಿಯವರು ಹೇಳಿದ್ದರು. ನಿಜ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ನಮ್ಮ...

ಅಧ್ಯಕ್ಷರು.—ನೀವು ಪ್ರಶ್ನೆ ಕೇಳುವುದಕ್ಕೆ ಬರುವುದಿಲ್ಲ. ನೋಟೀಸ್ ಕೊಟ್ಟವರಿಗಷ್ಟೇ ಅಧಿಕಾರ ಇರುತ್ತದೆ.

ಶ್ರೀ ಎಂ. ಎಸ್, ಕೃಷ್ಣನ್.—ನಮ್ಮ ಏರಿಯಾಕ್ಕೆ ಬಂದು ನೋಡಿ, ನಿಮಗೆ ಆಗ ಗೊತ್ತಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಪ್ರಪಂಚ ಬ್ಯಾಂಕಿನಿಂದ ಬರತಕ್ಕ ಸಾಲ ನಿಧಾನವಾಗಬಹುದೆಂದು ಹೇಳಿದ್ದಾರೆ. ಆದನ್ನು ತರುವುದು ನಿಧಾನವಾದರೆ ಈ ಸ್ಕೀಮ್‌ನ್ನು ಜಾರಿಗೆ ಕೊಡುವುದಕ್ಕೆ ಖರ್ಚು ಜಾಸ್ತಿಯಾಗುತ್ತದೆಂದು ಹೇಳಿದ್ದಾರೆ. ಈ ಬಗ್ಗೆ ನಾವು ಎಲ್ಲಾ ರೀತಿಯ ಪ್ರಯತ್ನ ಮಾಡಿ ನೀರನ್ನು ಆದಷ್ಟು ಬೇಗ ತರುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸ ಬಯಸುತ್ತೇನೆ.

ಶ್ರೀ ಎಂ. ರಘುಪತಿ.—ಈ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಈಗಾಗಲೇ ಕಾರ್ಯ ಪ್ರಾರಂಭವಾಗಿದೆ.

ನಿಯಮ 334ರ ಮೇರೆಗೆ

1) ದಕ್ಷಿಣಕನ್ನಡ ಜಿಲ್ಲೆಯ 62 ತೊಕ್ಕುರು ಗ್ರಾಮಕ್ಕೆ ನಲ್ಲಿ ನೀರಿನ ಟ್ಯಾಂಕನ್ನು ನಿರ್ಮಿಸುವುದು.

† ಶ್ರೀ ಎನ್. ಎಂ. ಅಡ್ಯಂತಾಯ.—ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ೬೨ ತೊಕ್ಕುರು ಗ್ರಾಮಕ್ಕೆ ಒಳಪಟ್ಟು ನಲ್ಲಿ ನೀರಿನ ಟ್ಯಾಂಕೊಂದು ಮಂಜೂರಾಗಿದ್ದು ಆ ಗ್ರಾಮದ ನಲ್ಲಿ ನೀರಿನ ಟ್ಯಾಂಕನ್ನು ೧೦ನೇ ತೊಕ್ಕುರು ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವುದು ಸರ್ಕಾರದ ಉದಾಸೀನತೆ

ಮಂತ್ತು ನಿರ್ಲಕ್ಷ್ಯಕ್ಕೆ ಉದಾಹರಣ. ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದ ರೀತಿಯು ಈ ಕ್ರಮದ ಕುರಿತು ಇಲಾಖಾ ವಿಚಾರಣೆ ನಡೆಸಿ ಕೂಡಲೇ ತೊಕಾರು ಗ್ರಾಮಕ್ಕೆ ನಲ್ಲಿ ನೀರಿನ ಟ್ಯಾಂಕ್ ನಿರ್ಮಾಣಕ್ಕೆ ಆದೇಶ ನೀಡಬೇಕೆಂದು ಗ್ರಾಮಾಭಿವೃದ್ಧಿ ಸಚಿವರಿಗೆ ಒತ್ತಾಯಿಸುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಆ ಬಗ್ಗೆ ನನ್ನ ಹತ್ತಿರ ವಿವರ ಇಲ್ಲ. ಅದನ್ನು ತರಿಸಿ ಹೇಳುತ್ತೇನೆ.

2) ಹುಕ್ಕೇರಿ ಭೂ ನ್ಯಾಯ ಮಂಡಲಿಗೆ ನಾಮಕರಣ ಹೊಂದಿದ ಸದಸ್ಯರನ್ನು ವಜಾ ಮಾಡುವ ಬಗ್ಗೆ

† ಶ್ರೀ ಮಲ್ಲಾರಿಗೌಡ ಎಸ್, ಪಾಟೀಲ್.—ಅಧ್ಯಕ್ಷರೇ, ಹುಕ್ಕೇರಿ ಭೂ ನ್ಯಾಯ ಮಂಡಲಿಯ ನಾಮಕರಣವಾಗಿ ಸುಮಾರು ದಿನಗಳಾದರೂ ಸಭೆಯು ಸದಸ್ಯರ ಗೈರು ಹಾಜರಿಂದಾಗಿ ನಡೆಯುತ್ತಿಲ್ಲ. ನಾಮಂಕರಣ ಹೊಂದಿರುವ ಸದಸ್ಯರುಗಳ ಹೆಸರನ್ನು ಮರುಪರಿಶೀಲನೆ ಮಾಡುವಂತೆ ಹಾಗೂ ಸ್ಥಳೀಯ ಶಾಸಕರನ್ನು ವಜಾ ಮಾಡುವಂತೆ ಜನರು ಒತ್ತಾಯಿಸುತ್ತಿದ್ದು ಸಭೆಗೆ ಗೈರುಹಾಜರಿದ್ದ ನಾಮಕರಣ ಹೊಂದಿರುವ ಸದಸ್ಯರನ್ನು ಕೂಡಲೆ ವಜಾ ಮಾಡಿ ಹೊಸ ಭೂ ನ್ಯಾಯ ಮಂಡಲಿಯನು ರಚಿಸೆ ಮಾಡುವುದಕ್ಕಾಗಿ ಸರ್ಕಾರದ ಕ್ರಮವೇನು ?

ರಾಜಕೀಯ ದುರುದ್ದೇಶದಿಂದ ವಿರೋಧ ಪಕ್ಷದಿಂದ ನಾಮಕರಣ ಹೊಂದಿರುವ ಶಾಸಕರನ್ನು ವಜಾ ಮಾಡುವಂತೆ ಸ್ಥಳೀಯ ಮುಖಂಡರು ಸರ್ಕಾರದ ಮೇಲೆ ಒತ್ತಾಯ ತರುತ್ತಿದ್ದು ಇದಕ್ಕೆ ಸರ್ಕಾರ ಮಣಿದಿದೆ. ಮಾನ್ಯ ಮುಖ್ಯಮಂತ್ರಿಗಳು ಹಿಡಕಲ್ ಜಲ ಯೋಜನೆಗೆ ಬಂದಾಗ ಈ ಬಗ್ಗೆ ಪತ್ರಕರ್ತರು ಕೂಡ ಪ್ರಶ್ನೆಯನ್ನು ಕೇಳಿರುತ್ತಾರೆ. ರಾಜಕೀಯ ದುರುದ್ದೇಶದಿಂದ ಕೂಡಿರುವ ಜನರನ್ನು ನೇರವಾಗಿ ಸರ್ಕಾರ ಬೆಂಬಲಿಸುತ್ತಿದೆಯೆಂದು ಆರೋಪ ಮಾಡಬೇಕಾಗುತ್ತದೆ.

ಜನರಿಗಾಗಂತ್ತಿರುವ ತೊಂದರೆಯನ್ನು ಕೂಡಲೆ ನಿವಾರಿಸುವಂತೆ ಹಾಗೂ ಸದನದಲ್ಲಿ ಈ ಬಗ್ಗೆ ಹೇಳಿಕೆ ನೀಡುವಂತೆ ಕಂದಾಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಭೂ ನ್ಯಾಯ ಮಂಡಲಿ ರಚನೆಯಾದ ಮೇಲೆ ೩ ಸಭೆಗಳು ಆಗಿವೆ. ಅಲ್ಲಿ ಮಲ್ಲಾರಿಗೌಡರನ್ನು ಹೊರತುಪಡಿಸಿ ಉಳಿದ ಸದಸ್ಯರು ಗೈರುಹಾಜರಾಗಿದ್ದಾರೆ. ಈ ಬಗ್ಗೆ ಪುನರ್ ಪರಿಶೀಲನೆಗೆ ಆಲೋಚನೆ ಮಾಡಿದ್ದು ಅದನ್ನು ಆದಷ್ಟು ಬೇಗ ಮಾಡುತ್ತೇವೆ. ಇನ್ನು, ಇಲ್ಲಿ ರಾಜಕೀಯ ದುರುದ್ದೇಶ ಏನೂ ಇಲ್ಲ. ಇದರಲ್ಲಿ ಮಾನ್ಯ ಸದಸ್ಯರೂ ಸಹಾ ಇದ್ದಾರೆ. ಯಾರಿಂದಲೂ ಒತ್ತಡ ಬರುವ ಪ್ರಶ್ನೆ ಇಲ್ಲ. ಆದಷ್ಟು ಜಾಗ್ರತೆ ಇದನ್ನು ಪುನರ್ ರಚನೆ ಮಾಡುತ್ತೇವೆ.

3) ರಾಜ್ಯದಲ್ಲಿ ಆಲೂಗಡ್ಡೆ ಬೆಳೆಗೆ ಬೆಂಬಲ ಬೆಲೆ ನೀಡುವುದು.

† ಶ್ರೀ ಆರ್. ವೆಂಕಟರಾಮಯ್ಯ... ಅಧ್ಯಕ್ಷರೇ, ಕರ್ನಾಟಕಾದ್ಯಂತ ರೈತರು ಆಲೂಗಡ್ಡೆ ಬೆಳೆಯನ್ನು ಇಟ್ಟು ಫಸಲು ರೂಪಣೆಗೆ ಬಂದಿದೆ ಹಾಗೂ ಅದು ಮಾರ್ಕೆಟ್ಟಿಗೆ ಕಳುಹಿಸಲ್ಪಡುತ್ತಿದೆ. ಬಿತ್ತನೆ ಬೀಜವನ್ನು ಕ್ವಿಂಟಾಲ್‌ಗೆ ೪೦೦ ರೂಪಾಯಿನಂತೆ ಕೊಂಡು ಬೆಳೆ ಇಟ್ಟರು. ಈಗ ಅದರ ಬೆಲೆ ಕ್ವಿಂಟಾಲ್‌ಗೆ ೧೮೦ ರೂಪಾಯಿಗೆ ತೆಗೆದುಕೊಳ್ಳುವವರಿಲ್ಲದೆ ಅದನ್ನು ಡಿಸ್ಪೋಸ್ ಸೇಲ್ ಅತಿ ಕಡಿಮೆ ಬೆಲೆಗೆ ಮಾರಲ್ಪಟ್ಟ ರೈತರು ದಿವಾಳಿಗೊಳ್ಳುವ ಪರಿಸ್ಥಿತಿಯಲ್ಲಿದ್ದಾರೆ ವ್ಯವಸಾಯ ಇಲಾಖೆಯಿಂದ ಅವರಿಗೆ ತಕ್ಕ ರಕ್ಷಣೆ ಕೊಟ್ಟಿಲ್ಲ ಮತ್ತು ಬೆಲೆಯನ್ನು ಸ್ಥಿರೀಕರಿಸಲು ಪ್ರಯತ್ನ ಪಡದೆ ರೈತರ ಕಷ್ಟ ಹೇಳಲಸದಳವಾಗಿದೆ ಯಾದುದರಿಂದ ಮಾನ್ಯ ವ್ಯವಸಾಯ ಮಂತ್ರಿಗಳು ಆಲೂಗಡ್ಡೆಗೆ ಸಪೋರ್ಟ್ ಪ್ರೈಸ್ ಡಿಕ್ಲೇರ್ ಮಾಡಿ ರೈತರ ನೆರವಿಗೆ ಬರಲು ಮನವಿ ಮಾಡಿ ಮಾನ್ಯ ವ್ಯವಸಾಯ ಮಂತ್ರಿಗಳಿಗೆ ಈ ಬಗ್ಗೆ ಸೂಚನೆ ಕೊಡಲಾಗಿದೆ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಆಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.